ಸಮಾನ ವೇತನವೆಂದು ಘೋಷಿಸಿದೆ ಯಾದರೂ ಇವರುಗಳ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಯಾವ ತೀರ್ಪನ್ನೂ ನೀಡಿಲ್ಲ. ಇವರ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರವು ಪರಿಶೀಲಿಸಲಾಗುವುದೆಂದು ಮಾತ್ರ ಹೇಳಿದೆ. ಆದರೆ ಈಗಾಗಲೇ ಹೇಳಿರುವಂತೆ ಈ ದಿನಗೂಲಿ ನೌಕರರನ್ನು ನೇಮಿಸಿಕೊಳ್ಳುವುದರಲ್ಲಿ ಎಲ್ಲರಿಗೂ ಸಮಾನ ಅವಕಾಶವಿರಬೇಕೆಂಬ ಸಂವಿಧಾನದ ತತ್ವವನ್ನು ಪಾಲಿಸಿಲ್ಲ ವಾದ್ದರಿಂದ ಇವರ ಸೇವೆಯನ್ನು ಸಕ್ರಮಗೊಳಿಸುವುದು ಕಷ್ಟಕರವಾಗುವುದು.

ಕರ್ನಾಟಕ ರಾಜ್ಯ ಸರ್ಕಾರೀ ದಿನಗೂಲಿ ನೌಕರರ ಮಹಾಮಂಡಲ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಒಂದು ಸ್ಥಾನ ಮತ್ತು ಸೇವೆಯನ್ನು ಖಾಯಂ ಮಾಡುವುದು ಒಳಗೊಂಡಂತೆ ೨೬ ಬೇಡಿಕೆಗಳನ್ನು ಮಂಡಿಸಿ ಇವುಗಳನ್ನು ಪೂರೈಸದಿದ್ದಲ್ಲಿ ಮುಷ್ಕರ ಹೂಡುವುದಾಗಿ ತಿಳಿಸಿದ್ದರು. ಈ ದಿನಗೂಲಿ ನೌಕರರಿಗೆ ಒಂದು ಸ್ಥಾನ ಕಟ್ಟಿಸಿಕೊಡುವುದು. ಅವರ ಸೇವೆಯನ್ನು ಸಕ್ರಮಗೊಳಿಸುವುದು ಇವುಗಳನ್ನು ಮೇಲೆ ಹೇಳಿದ ಕಾರಣಗಳಿಂದಾಗಿ ಒಪ್ಪಲಾಗಲಿಲ್ಲ ಆದಾಗ್ಯೂ ಅವರ ಇತರ ಬೇಡಿಕೆಗಳಾದ ವರ್ಗಾವಣೆ ಮಾಡದಿರುವುದು ಕಿರುಕುಳ ಕೊಡುವುದು ಇವುಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಇವರುಗಳ ಸೇವೆಯನ್ನು ಸಕ್ರಮಗೊಳಿಸುವುದರ ಬಗ್ಗೆ ಸರ್ಕಾರ ಯಾವ ಆಶ್ವಾಸನೆಯನ್ನು ನೀಡಿಲ್ಲ.

ಈ ನೌಕರರು ಮುಷ್ಕರ ಮಾಡಿದರೂ ಸಹ ಇವರು ನಿರ್ವಹಿಸುತ್ತಿರುವ ಕೆಲಸಕ್ಕೆ ಯಾವ ಅಡಚಣೆಯಾಗದೆಂದು ಭಾವಿಸಲಾಗಿದೆ.

ಅಧ್ಯಕ್ಷರು.—ಶ್ರೀ ಬಾಬುರೆಡ್ಡಿ ವಿ. ತುಂಗಳ್‌ರವರೆ ತಮ್ಮದು ನಾಳೆ ತೆಗೆದುಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆ

ತುಮಕೂರಿನ ಸಿದ್ದಗಂಗಾ ತಾಂತ್ರಿಕ ಸಂಸ್ಥೆಯ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಹಾಗೂ ಹಿಂಸೆ ನಡೆದಿರುವುದು

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ. ತುಮಕೂರಿನಲ್ಲಿರುವ ಸಿದ್ದಗಂಗಾ ತಾಂತ್ರಿಕ ಸಂಸ್ಥೆಯ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಹಾಗೂ ಹಿಂಸೆಯ ಬಗ್ಗೆ ಮಾನ್ಯ ಗೃಹ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—(ಗೃಹ ಮಂತ್ರಿಗಳು).—

ದಿನಾಂಕ : ೧೫/೧೪-೧-೮೭ರಂದು ರಾತ್ರಿ ೧-೦೦ ಸಮಯದಲ್ಲಿ ಸಿದ್ದಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇಂಜಿನಿಯರಿಂಗ್ ಕಾಲೇಜ್‌ನಲ್ಲಿ ಮೊದಲನೆಯ ವರ್ಷದ ಬಿ. ಇ. ಓದುತ್ತಿರುವ ತಮ್ಮ ಸಹೋದರ (ತಮ್ಮ) ಪಂಕಜ್ ಗುಪ್ತರವರು ದಿನಾಂಕ : ೧೨-೧-೮೭ ರಂದು ಮಧ್ಯಾಹ್ನ ೧೨ ಗಂಟೆಯಿಂದ ತಪ್ಪಿಸಿಕೊಂಡಿರುವುದಾಗಿ ಕಾಂತ ಗುಪ್ತರವರು ತುಮಕೂರು ವೆಸ್ಟ್‌ಎಂಡ್ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟರು. ಇದನ್ನು ಕ್ರೈಂ ನಂ. ೫/೮೭ ರಲ್ಲಿ ದಾಖಲು ಮಾಡಿಕೊಳ್ಳಲಾಗಿದೆ. ಈ ಹುಡುಗನ ಚಹರೆಯನ್ನು ತುಮಕೂರು ಜಿಲ್ಲೆಯ ಮತ್ತು ಸುತ್ತಮುತ್ತಲಿನ ಪೊಲೀಸ್ ಠಾಣೆಗೆ ತಿಳಿಸಲಾಯಿತು. ನಂತರ ದಿನಾಂಕ : ೧೪-೧-೮೭ ರಂದು ಬೆಳಿಗ್ಗೆ ೧೦ ಗಂಟೆಗೆ ಪಂಕಜ್ ಗುಪ್ತರವರು ತುಮಕೂರಿಗೆ ಹಿಂತಿರುಗಿದರು.

೨. ಪಂಕಜ್ ಗುಪ್ತರವರು ದಿನಾಂಕ : ೧೭-೧-೮೭ರಂದು ಹಿಂದಿರುಗಿ ಬಂದ ನಂತರ ಕೊಟ್ಟ ಹೇಳಿಕೆಯ ಪ್ರಕಾರ ೧೨-೧-೮೭ ರಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮುಸ್ಲಿಂ ಹಾಸ್ಟೆಲ್ ಹತ್ತಿರ ಹೋಗುತ್ತಿದ್ದಾಗ ತುಮಕೂರು ಕಡೆಯಿಂದ ಬಂದ ಕಾರಿನಿಂದ ಇಬ್ಬರು ಇಳಿದು ಬಂದರು. ಅವರಲ್ಲಿ ಒಬ್ಬರು ಚಾಕುವಿನಿಂದ ತೋರಿಸಿದರು ಮತ್ತು ಇನ್ನೊಬ್ಬರು ಕಿವಿ ಬೂರುಜೆಗೆ (ಟೆಂಪಲ್) ಹೊಡೆದಾಗ ಪ್ರಜ್ಞಾಹೀನರಾದರು. ಅವರಿಗೆ ಪ್ರಜ್ಞೆ ಬಂದಾಗ ಬೆಳಗಿನ ಜಾವ ಸುಮಾರು ಮೂರುವರೆ ಗಂಟೆ ಯಾಗಿತ್ತು. ಆಗ ಅವರು ಮದ್ಯಾಸಿನಲ್ಲಿದ್ದರು. ಮದ್ಯಾಸಿನಿಂದ ಒಂದು ಲಾರಿಯಲ್ಲಿ ತಮ್ಮ ತುಮಕೂರಿಗೆ ಹತ್ತು ಗಂಟೆಗೆ ಬಂದರೆಂದು ತಿಳಿಸಿದರು.

೩. ಪಂಕಜ್‌ಗುಪ್ತರವರಿಗೆ ಕಾರಿನ ನಂಬರಾಗಲೀ ಅಥವಾ ಲಾರಿಯ ನಂಬರಾಗಲೀ ತಿಳಿದಿಲ್ಲ. ಅವರು ಹೇಳುವ ಸ್ಥಳ ತುಂಬಾ ಜನನಿಬಿಡವಾದ ಸ್ಥಳ. ಆದುದರಿಂದ ಮಧ್ಯಾಹ್ನ ೧೨ ಗಂಟೆ ಸಮಯದಲ್ಲಿ ಬೇರೆ ಜನರಿಗೆ ಗೊತ್ತಿಲ್ಲದಂತೆ ಅಪಹರಣ ಮಾಡುವುದು ಕಷ್ಟ. ಪಂಕಜ್ ಗುಪ್ತರವರನ್ನು ಪೋಲೀಸರು ಕೆಲವು ಪ್ರಶ್ನೆಗಳನ್ನು ಕೇಳಿದಾಗ ಸರಿಯಾದ ಮಾಹಿತಿ ನೀಡಿಲ್ಲ. ಆದರೂ ಅವರ ಹೇಳಿಕೆಯ ಮೇರೆಗೆ ಪ್ರಕರಣವನ್ನು ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ.

೪. ದಿನಾಂಕ : ೧೭-೧-೮೭ ರ ರಾತ್ರಿ ೮.೩೦ರ ಸಮಯದಲ್ಲಿ ಸಿದ್ದಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ೨ನೇ ವರ್ಷದ ಬಿ. ಇ. ಯನ್ನು ಓದುತ್ತಿರುವ ಮಧು ಎಂಬುವರು ಒಂದು ದೂರನ್ನು ಕೊಟ್ಟರು. ಆದರ ಪ್ರಕಾರ ಅವರು ಇಂಜಿನಿಯರಿಂಗ್ ಕಾಲೇಜ್ ಹಾಸ್ಟೆಲಿನಲ್ಲಿರುವ ವಿದ್ಯಾರ್ಥಿ. ಅವರು ಸಂಜೆ ೭.೧೫ರ ಸಮಯದಲ್ಲಿ ಅಂಗಡಿಯ ಮುಂದೆ ನಿಂತಿರುವಾಗ ಯಾರೋ ನಾಲ್ಕು ಜನರು ಕರೆದರೆಂದು ತಿರುಗಿ ನೋಡಲಾಗಿ ಅವರಲ್ಲಿ ಒಬ್ಬನ ಪತ್ತಿರ ಚಾಕು ಇತ್ತು ಆಗಂತುಕರು ರಾಷ್ಟ್ರೀಯ ಹೆದ್ದಾರಿಯಿಂದ ಸುಮಾರು ಅರ್ಧ ಕಿ. ಮೀ. ದೂರದಲ್ಲಿರುವ ಗಲ್ಲಿಗೆ ಕರೆದುಕೊಂಡು ಹೋದರು. ಅದೇ ವೇಳೆಯಲ್ಲಿ ಸಿರಾ ಕಡೆಯಿಂದ ಬರುತ್ತಿರುವ ಟ್ರಕ್ಕಿಗೆ ಹತ್ತಿರ ಬಂದಾಗ ಮಧು ಜೋರಾಗಿ ಕೂಗಿಕೊಂಡರು. ಇವನ್ನು ಕೇಳಿ ನಾಲ್ಕು ಜನ ಅಪರಾಧಿಗಳು ಕಾರಿನಲ್ಲಿ ಪರಾರಿಯಾದರು. ಅಪರಾಧಿಗಳ ವಯಸ್ಸು ಸುಮಾರು ೨೦ ರಿಂದ ೨೫ ವರ್ಷ. ಶ್ರೀ ಮಧು ರವರಿಗೆ ತುಟಿಯ ಮೇಲ್ಭಾಗದಲ್ಲಿ ಒಂದು ಸಣ್ಣ ಗಾಯವಾಗಿದೆ. ದೂರಿದಂತೆ ಇದನ್ನು ಅಪರಾಧಿಗಳೇ ಮಾಡಿರಬಹುದು.

೫. ಶ್ರೀ ಮಧು ರವರ ದೂರಿನ ಮೇಲೆ ಹೊಸ ಬಡಾವಣೆಯ ಪೋಲೀಸ್ ಠಾಣೆಯಲ್ಲಿ ಐ.ಪಿ.ಸಿ .ಕಲಂನ ೩೨೪, ೩೨೫ ರೆಡ್‌ವಿತ್ ೩೧೧ ರಂತೆ ಕ್ರೈಂ ನಂ. ೮/೮೭ ರಲ್ಲಿ ಪ್ರಕರಣವನ್ನು ದಾಖಲು ಮಾಡಿಕೊಳ್ಳಲಾಗಿದೆ. ಈ ಪ್ರಕರಣದಲ್ಲಿಯೂ ಸಹ ಶ್ರೀ ಮಧುರವರು ಕಾರಿನ ನಂಬರು ಹಾಗೂ ಟ್ರಕ್ಕಿನ ನಂಬರು ನೆನಪಿಲ್ಲವೆಂದು ತಿಳಿಸಿದ್ದಾರೆ. ಆದರೂ ಕೂಡಾ ತನಿಖೆಯನ್ನು ನಡೆಸಲಾಗುತ್ತಿದೆ.

೬. ಸ್ಥಳೀಯ ಪೋಲೀಸರು ಹಾಸ್ಟಲಿಗೆ ಆಗಾಗ್ಗೆ ಭೇಟಿಯಿತ್ತು ವಿದ್ಯಾರ್ಥಿಗಳಿಗೆ ಧೈರ್ಯ ನೀಡುತ್ತಿದ್ದಾರೆ. ಶ್ರೀ ಪಂಕಜ್‌ಗುಪ್ತ ಮತ್ತು ಶ್ರೀ ಮಧು ಅವರು ತಮ್ಮ ಸಹಪಾಠಿಗಳೊಂದಿಗೆ ತಮಾಷೆಯಾಡುತ್ತಿದ್ದಾರೋ ಅಥವಾ ಈ ಘಟನೆಯು ನಿಜವೋ ಎಂಬುದನ್ನು ವಿಚಾರಿಸಲಾಗುತ್ತಿದೆ. ಪಂಕಜ್ ಗುಪ್ತ ಮತ್ತು ಮಧು ಅವರಿಂದ ಹಣವಾಗಲೀ ಇಲ್ಲವೇ ಬೆಲೆ ಬಾಳುವ ಒಡವೆಗಳಾಗಲೀ ಅಪಹರಿಸಿಲ್ಲವೆಂಬುದು ಗಮನಾರ್ಹ ವಿಷಯ. ಸಿದ್ದಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇಂಜಿನಿಯರಿಂಗ್ ಕಾಲೇಜ್ ಹಾಸ್ಟೆಲ್‌ನಿಂದ ಅಪಹರಣದ ಬಗ್ಗೆ ಯಾವ ಪ್ರಕರಣಗಳೂ ಈ ವರೆವಿಗೆ ವರದಿಯಾಗಿಲ್ಲ. ದಿನಾಂಕ : ೧೫-೧-೮೭ ರಂದು ಪಂಕಜ್ ಗುಪ್ತ ರವರು ಮೊದಲನೇ ವರ್ಷದ ಇಂಜಿನಿಯರಿಂಗ್ ಪರೀಕ್ಷೆಯ ಒಂದು ಪ್ರಶ್ನೆ ಪತ್ರಿಕೆಗೆ ಹಾಜರಾಗಿಲ್ಲವೆಂದು ತಿಳಿದು ಬಂದಿದೆ. ಆ ಪತ್ರಿಕೆಗೆ ಅವನು ಸರಿಯಾಗಿ ತಯಾರಾಗಿಲ್ಲದುದರಿಂದ ಇವರು ತಂದೆ ತಾಯಿಗಳಿಗೆ ಕಾರಣ ಕೊಡುವುದಕ್ಕೋಸ್ಕರ ಈ ಕಥೆಯನ್ನು ಕಟ್ಟಿರಬಹುದೆಂದು ತೋರುತ್ತದೆ.

೭. ಇನ್ನೊಂದು ಪ್ರಕರಣದ ಬಗ್ಗೆ ದಿನಾಂಕ : ೬-೧-೮೭ ರಂದು ಇದೇ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಯೊಬ್ಬನು ಬೆಂಗಳೂರಿನ ಉಪ್ಪಾರ ಪೇಟೆ ಪೊಲೀಸ್ ಠಾಣೆಗೆ ಒಂದು ದೂರನ್ನು ಕೊಟ್ಟು ತನ್ನ ಸ್ನೇಹಿತನಾದ ಶ್ರೀಪತ್‌ರಾವ್ (ಅದೇ ಕಾಲೇಜಿನ ಮೊದಲನೇ ವರ್ಷದ ಬಿ.ಇ. ವಿದ್ಯಾರ್ಥಿ) ದಿನಾಂಕ ೩-೧-೮೭ ರಿಂದೀಚೆಗೆ ಕಾಣೆಯಾಗಿದ್ದಾನೆಂದು ತಿಳಿಸಿದ್ದಾರೆ. ದಿನಾಂಕ : ೩-೧-೮೭ ರಿಂದೀಚೆಗೆ ಕಾಣೆಯಾಗಿದ್ದಾನೆಂದು ತಿಳಿಸಿದ್ದಾರೆ. ದಿನಾಂಕ: ೯.೧-೮೭ ರಂದು ಶ್ರೀಪತ್‌ರಾವ್ ರವರು ಹೊಸ ಬಡಾವಣೆ ಪೋಲೀಸ್ ಠಾಣೆಗೆ ಬಂದು ತಾನು ಕೆಲವು ದೇವಸ್ಥಾನಗಳನ್ನು ನೋಡಲು ಹೋಗಿದ್ದೇನೆಂದು ತಿಳಿಸಿದ್ದಾರೆ.

೮. ಈ ಮೂರೂ ಪ್ರಕರಣಗಳಲ್ಲಿ ಸೂಕ್ತ ತನಿಖೆ ನಡೆಸಲು ನಿಯಮಾನುಸಾರವಾಗಿ ಕ್ರಮ ತೆಗೆದುಕೊಂಡಿದ್ದು, ತನಿಖೆಯನ್ನು ಮುಂದುವರೆಸಲಾಗುತ್ತಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ತಾತ್ಕಾಲಿಕವಾಗಿ ಗೊತ್ತಿರುವ ಅಂಶವನ್ನು ಬೇಳೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಸೂಚನೆಯ ಜೊತೆಯಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿರತಕ್ಕಂಥ ಪೇಳಿಕೆಯನ್ನೂ ಕೂಡ ಕಳುಹಿಸಿ ಕೊಟ್ಟಿದ್ದೇನೆ.

ಇದರಲ್ಲಿ ತುಂಬ ವಿವರವಾಗಿ ಯಾವ ಒಂದು ಸ್ಥಿತಿ ಇದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಯಾರು ಯಾರು ಈ ಪ್ರಕರಣದಲ್ಲಿ ಸಿಕ್ಕಿಹಾಕಿಕೊಂಡಿರತಕ್ಕಂತ ವಿದ್ಯಾರ್ಥಿಗಳು ಇದ್ದಾರೆ ಅವರು ತುಂಬಾ ಭಯಗ್ರಸ್ತ ಪರಿಸ್ಥಿತಿಯಲ್ಲಿದ್ದಾರೆ, ತಮ್ಮ ಸ್ನೇಹಿತರ ಜೊತೆಯಲ್ಲೂ ಕೂಡ ಒಂದು ಶಬ್ದವನ್ನು